5C.R.P.67

| |
|---|
| Form No.4 (Civil) Deposition Sheets (R.P.No.57) |

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 11.07.2025 ರಂದು ಪ್ರಮಾಣ ವಚನ ಬೋಧಿಸಲಾಗಿದೆ.
ಸಿ. ಡಬ್ಲ್ಯೂ: 6 ಪಿ. ಡಬ್ಲ್ಯೂ:5

| | |
|---|---|
| ಸಾಕ್ಷಿದಾರರ ಹೆಸರು | ಸವಿತಾ |
| ಗಂಡನ ಹೆಸರು | ಚಂದ್ರಶೇಖರ್ |
| ವಯಸ್ಸು | 35 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಹೂಟಗಳ್ಳಿ , ಮೈಸೂರು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ.1 ನನ್ನ ತಮ್ಮ. ಫ್ರಾಸಾ.2,3 ಗೊತ್ತು. ಅವರು ನಮ್ಮ ತಮ್ಮನ ಗ್ರಾಮದವರಾಗಿರುತ್ತಾರೆ. ಚಾಸಾ.5 ನನ್ನ ಅಕ್ಕ, ಫ್ರಾಸಾ.4 ನನ್ನ ಚಿಕ್ಕಮ್ಮ. ನನ್ನ ತಾಯಿ ಮಹದೇವಮ್ಮ ರವರ ತೀರಿಕೊಂಡು 3 ವರುಷವಾಗಿರುತ್ತದೆ. ನನ್ನ ತಾಯಿ ತೀರಿಕೊಳ್ಳುವ ಗ್ರಾಮದಲ್ಲಿ ಅವರು ನೆಟ್ಟಕಲ್ಲು ಗ್ರಾಮದಲ್ಲಿ ವಾಸವಾಗಿದ್ದರು. ನನ್ನ ತಾಯಿ ಜೊತೆ ನನ್ನ ತಂದೆ ಮತ್ತು ನನ್ನ ತಮ್ಮ ವಾಸವಿದ್ದರು. ನನ್ನ ತಾಯಿ ತೀರಿಹೋದ ಕಾಲಕ್ಕೆ ಅವರು ವಾಸವಿದ್ದ ಮನೆಯನ್ನು ಕಟ್ಟಿಸಿ, ಸುಮಾರು 1 ತಿಂಗಳಾಗಿತ್ತು.
2. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು, ಬೇರೇನು ಕೆಲಸ ಮಾಡುತ್ತಿರಲಿಲ್ಲ. ಅವರು ಹೊಲದ ಬಳಿ ಆಡು-ಕುರಿಗಳನ್ನು ಮೇಯಿಸುತ್ತಿದ್ದರು. ನನ್ನ ತಾಯಿ ಮನೆಗೆಲಸ ಮಾಡುತ್ತಿದ್ದರು.
3. ಮನೆ ಕಟ್ಟಲೆಂದು ನನ್ನ ತಮ್ಮ ಊರಿನಲ್ಲಿ ಉಳಿದುಕೊಂಡಿದ್ದರು. ನನ್ನ ತಮ್ಮ ಮೈಸೂರಿನಲ್ಲಿ ಎಲ್ಲೋ ಕೆಲಸ ಮಾಡುತ್ತಿದ್ದನು, ಖಚಿತವಾಗಿ ನನಗೆ ಗೊತ್ತಿಲ್ಲ.ನನಗೂ, ಆತನಿಗೂ contact ಇದ್ದಿರಲಿಲ್ಲ.
4. ನನ್ನ ತಾಯಿ ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಮೈಸೂರಿನ ಕೆ ಆರ್ ಆಸ್ಪತ್ರೆ ಯಲ್ಲಿ ಇದ್ದಾಗ ಒಂದು ವಾರಗಳ ಕಾಲ ನಾನು ಅವರನ್ನು ಶುಶ್ರೂಷೆ ಮಾಡಿರುತ್ತೇನೆ.

ಫೋನ್ ಮುಖೇನ ನನ್ನ ತಮ್ಮ ಸಿದ್ದರಾಜು ರವರು, ಕೆ.ಆರ್.ಆಸ್ಪತ್ರೆಗೆ ಬಂದು, ನಮ್ಮ ತಾಯಿಯನ್ನು ದಾಖಲು ಮಾಡಿದ್ದೇವೆ ಎಂದು ಹೇಳಿರುತ್ತಾರೆ. ನನ್ನ ತಾಯಿಯನ್ನು ನೋಡಿದಾಗ ಆಕೆಗೆ ಸುಟ್ಟ ಗಾಯಗಳಾಗಿತ್ತು. ನನ್ನ ತಾಯಿಯನ್ನು ಈ ಬಗ್ಗೆ ವಿಚಾರಿಸಿರಲಿಲ್ಲ. ನನ್ನ ತಾಯಿಯ ಕೈ-ಕಾಲು, ಬೆನ್ನಿನ ಬಳಿ ಸುಟ್ಟ ಗಾಯಗಳಾಗಿತ್ತು. ಸದರಿ ಆಸ್ಪತ್ರೆಯಲ್ಲಿ, ಫ್ರಾಸಾ. 4 ಮತ್ತು ಚಾಸಾ. 5 ರವರು ಇದ್ದರು. ನನ್ನ ತಮ್ಮ ಸದರಿ ಆಸ್ಪತ್ರೆಯಲ್ಲಿ ಬೇರೆ ವಾರ್ಡಿನಲ್ಲಿ ಇದ್ದರು. ಆತನ ಕಿವಿ, ಕಣ್ಣಿನ ಬಳಿ ಸುಟ್ಟ ಗಾಯಗಳಾಗಿತ್ತು. ನನ್ನ ತಾಯಿ ಮತ್ತು ನನ್ನ ತಮ್ಮ ಕೆ ಆರ್ ಆಸ್ಪತ್ರೆ ಗೆ ದಾಖಲಾದ ಮರು ದಿನ ಸದರಿ ಆಸ್ಪತ್ರೆಗೆ ನಾನು ಹೋಗಿದ್ದೆನು. ನನ್ನ ತಾಯಿ ಹಾಗೂ ನನ್ನ ತಮ್ಮ ಆ ಸಮಯದಲ್ಲಿ ಮಾತನಾಡುವ ಸ್ಥಿತಿಯಲ್ಲಿ ಇದ್ದರು. ಸದರಿ ಸುಟ್ಟ ಗಾಯಗಳು ಹೇಗೆ ಆಯಿತೆಂದು ನಾನು ನನ್ನ ತಾಯಿ ಮತ್ತು ನನ್ನ ತಮ್ಮನನ್ನು ವಿಚಾರಿಸಿಲ್ಲ. ಸದರಿ ಒಂದು ವಾರಗಳ ಕಾಲ ನಾನು ಅಲ್ಲಿ ಇದ್ದ ಸಮಯದಲ್ಲಿ ಅವರಿಬ್ಬರನ್ನು ವಿಚಾರಿಸಲಿಲ್ಲ, ನನ್ನ ಮನೆಯಲ್ಲಿ ಮಕ್ಕಳಿದ್ದರು, ಅವರಿಬ್ಬರಿಗೆ ಬೇಗ ಗುಣವಾಗಲಿ ಎಂದು ಬಯಸಿದ್ದೆನು. ಫ್ರಾಸಾ. 4 ಮತ್ತು ಚಾಸಾ. 5 ರವರು, ನನಗೆ ಏನು ಹೇಳಿಲ್ಲ.

5. ಆ ಸಮಯದಲ್ಲಿ ನನ್ನ ತಂದೆ ಎಲ್ಲಿದ್ದರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ, ಅವರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ತಂದೆ ಯಾಗಿರುತ್ತಾರೆ. ಆರೋಪಿಯ ವಿರುದ್ಧ ಯಾರು ದೂರು ನೀಡಿದ್ದಾರೆ ಎಂದು, ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ.

6. ಒ ಒಂದು ವಾರದ ನಂತರ ಕೆ ಆರ್ ಆಸ್ಪತ್ರೆಯಿಂದ ನನ್ನ ತಾಯಿಯನ್ನು ನೆಟ್ಟಕಲ್ಲು ಊರಿಗೆ ಕರೆದುಕೊಂಡು ಹೋಗಿದ್ದರು. 2 ದಿನಗಳ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ. ನಂತರವೂ ಸಹ ನಾನು ನನ್ನ ತಾಯಿಯ ಮರಣದ ಕಾರಣವನ್ನು ಯಾರ ಬಳಿಯೂ ಕೇಳಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

7. ನಾನು ತಾಯಿಯೊಂದಿಗೆ 2-3 ದಿನಗಳಿಗೆ ಒಂದು ಸಾರಿ ಫೋನ್ ಮಾಡಿ ಮಾತನಾಡುತ್ತಿರಲ್ಲಿಲ್ಲ. ನನ್ನ ತಾಯಿ 2-3 ದಿನಗಳಿಗೆ ಒಂದು ಸಾರಿ ಫೋನ್ ಮಾಡಿ ಮಾತನಾಡುತ್ತಿರಲಿಲ್ಲ.

8. ಹೊಸ ಮನೆ ಕಟ್ಟಿಸಿದ ನಂತರ ನಾನು, ನನ್ನ ತಾಯಿಗೆ ಫೋನ್ ಮಾಡಿ ಮಾತನಾಡುತ್ತಿದ್ದೆನು ಎಂದರೆ ಸರಿಯಲ್ಲ. ಹೊಸದಾಗಿ ಮನೆ ಕಟ್ಟಿಸಿದ ನಂತರ, ನನ್ನ ತಂದೆ , ನನ್ನ ತಾಯಿ ಜೊತೆ ಈ ಮನೆಯನ್ನು ನಾನು ಕಟ್ಟಿಸಿದ್ದೇನೆ, ಇದು ನನ್ನದು, ನಾನು ಸಾಕುತ್ತಿರುವ ಆಡುಗಳು ಸಹ ನನ್ನದು ಎಂದು ಬೈಯುತ್ತಿದ್ದರೆಂದು ನನ್ನ ತಾಯಿ ಫೋನ್ ಮಾಡಿದಾಗ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಏನೋ ಕೋಪದಲ್ಲಿ ಬೈಯುತ್ತಾನೆ, ಆ ಮೇಲೆ ಸರಿ ಹೋಗುತ್ತಾನೆ ಎಂದು ನನ್ನ ತಾಯಿಗೆ ಸಮಾಧಾನ ಹೇಳುತ್ತಿದ್ದೆನು ಎಂದರೆ ಸರಿಯಲ್ಲ. 03.08.2022 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನನ್ನ ತಮ್ಮ ಪ್ರಾಸಾ. 1 ಸಿದ್ದರಾಜು, ನನಗೆ ಫೋನ್ ಮಾಡಿ, ನಮ್ಮ ತಾಯಿಗೆ, ನಮ್ಮತಂದೆ ಸೀಮೆಎಣ್ಣೆಯನ್ನು ಮೈಮೇಲೆ ಸುರಿದು ಬೆಂಕಿ ಹಚ್ಚಿದ್ದಾರೆಂದು ಬೆಂಕಿಯನ್ನು ಆರಿಸಲು ಹೋದ ತನಗೂ ಸಹ ಸುಟ್ಟ ಗಾಯಗಳಾಗಿದ್ದು ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆ ಗೆ ಆಂಬ್ಯುಲೆನ್ಸ್ ಬರುತ್ತಿರುವುದಾಗಿ ತಿಳಿಸಿದರು ಎಂದರೆ ಸಾಕ್ಷಿಯು, ಆಸ್ಪತ್ರೆಗೆ ನಾನು ಹೋದ ನಂತರ ಗೊತ್ತಾಯಿತು ಎಂದು ಹೇಳುತ್ತಾರೆ. ಅದೇ ದಿನ ರಾತ್ರಿ 11.00 ಗಂಟೆ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮನನಉನ ಆಸ್ಪತ್ರೆ ಗೆ ದಾಖಲಿಸಿದ ನಂತರ ತಾಯಿಯನ್ನು ವಿಚಾರಿಸಿದಾಗ, ದಿಃ 03.08.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮ ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ತಂದೆ ಸದರಿ ಮನೆ ಕಟ್ಟಿಸಿದ ವಿಚಾರದಲ್ಲಿ ಏಕಾಏಕಿ ನುಗ್ಗಿ, ನನ್ನ ತಾಯಿ ಮತ್ತು ತಮ್ಮನಿಗೆ ಅವಾಚ್ಯವಾಗಿ ಬೈದು, ಒಂದು ದೊಣ್ಣೆಗೆ ಬಟ್ಟೆಯನ್ನು ಸುತ್ತಿಕೊಂಡು ಸೀಮೆಎಣ್ಣೆ ತಾಯಿಯ ಮೇಲೆ ಎರಚಿ ದೊಣ್ಣೆಗೆ ಸುತ್ತಿಕೊಂಡಿದ್ದ ಬಟ್ಟೆಗೆ ಬೆಂಕಿ ಕಡ್ಡಿ ಗೀರಿ ನನ್ನ ತಾಯಿಗೆ ಹಚ್ಚಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಆಸ್ಪತ್ರೆ ಯಿಂದ ಬಿಡುಗಡೆ ಗೊಂಡು 10 ದಿನಗಳ ನಂತರ ತೀರಿಕೊಡಂರು ಎಂದರೆ ಸಾಕ್ಷಿಯು ಮನೆಯಲ್ಲಿಯೇ ನನ್ನ ತಾಯಿ ತೀರಿಕೊಂಡರು ಎಂದು ನುಡಿಯುತ್ತಾರೆ. ದಿಃ 02.09.2022 ರಂದು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೆನು ಎಂದರೆ ಸಾಕ್ಷಿಯು ಗಾಬರಿಯಲ್ಲಿ ನಾನು ಆಗ ಏನು ಹೇಳಿಕೆಯನ್ನು ಕೊಟ್ಟಿದ್ದೆನು ಎಂದು ಗೊತ್ತಿಲ್ಲ, ನಾನು ಸಹಿ ಮಾಡಿದ್ದೆನು ಎಂದು ನುಡಿಯುತ್ತಾರೆ. ಸಾಕ್ಷಿಗೆ ಹೇಳಿಕೆಯ ‘‘ ನನ್ನ ತಂದೆ ಸಿದ್ದೇಗೌಡ ............................................................ ಆಸ್ಪತ್ರೆಯಲ್ಲಿ ಬಂದು ನೋಡಿರುತ್ತೇನೆ’’ ಎಂಬ ಭಾಗವನ್ನು ಅಭಿಯೋಜಕರು ಓದಿಹೇಳಿದ್ದು, ಸದರಿ ಹೇಳಿಕೆಯ ಭಾಗವನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.16 ಎಂದು ಗುರುತಿಸಲಾಯಿತು.

9. ನೆಟ್ಟಕಲ್ಲು ಗ್ರಾಮದಲ್ಲಿ ಇರುವ ನಮ್ಮ ಮನೆಯಲ್ಲಿ ಯಾರು ವಾಸ ಇಲ್ಲ. ನನ್ನ ತಮ್ಮ ಸಿದ್ದರಾಜು - ಫ್ರಾಸಾ. 1 ರವರು ಹುಣಸೂರಿನಲ್ಲಿ ವಾಸವಿದ್ದಾರೆ. ನಮ್ಮ ಕುಟುಂಬದಲ್ಲಿ ನಾವೆಲ್ಲರೂ ನನ್ನ ತಮ್ಮ ಸಿದ್ದರಾಜುವಿಗೆ ಮದುವೆ ಮಾಡಿಸಬೇಕೆಂದು ನಿರ್ಧರಿಸಿರುತ್ತೇವೆ ಎಂದರೆ ಸರಿ. ಸದರಿ ಮನೆಯಲ್ಲಿ ದೀಪ ಹಚ್ಚಲು ಸಹ ಯಾರು ಇಲ್ಲ ಎಂದರೆ ಸಾಕ್ಷಿಯು ಹೋದರೆ ತಮ್ಮ ಮಾತ್ರ ಹೋಗಬೇಕಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಇರದೇ ಇದ್ದುದರಿಂದ, ಫ್ರಾಸಾ. 1 ರವರ ಮದುವೆ ಪ್ರಯತ್ನವು ವಿಫಲವಾಗಿದೆ ಎಂದರೆ ಸರಿಯಲ್ಲ. ನಾನು, ಫ್ರಾಸಾ. 3, 4 ಮತ್ತು ಚಾಸಾ. 5 ರವರು ಇತ್ತೀಚೆಗೆ, ಫ್ರಾಸಾ. 1 ರವರಿಗೆ ಮದುವೆ ಮಾಡಿಸಬೇಕು ಎಂದಕು ನೆಟ್ಟಕಲ್ಲು ಗ್ರಾಮದಲ್ಲಿ ಸಂಸಾರವನ್ನು ಇರಿಸಲು ನಾವು ಮಾತನಾಡಿಕೊಂಡಿದ್ದೆವು ಎಂದರೆ ಸಾಕ್ಷಿಯು ಮದುವೆ ಮಾಡಿಸಬೇಕು ಇದೆ ಎಂದು ಹೇಳುತ್ತಾರೆ. ನನ್ನ ತಂದೆಯನ್ನು, ನಾನು ಮತ್ತು ನಮ್ಮ ಕುಟುಂಬದವರು ಜಾಮೀನಿನ ಮೇಲೆ ಬಿಡುಗಡೆ ಗೊಳಿಸಲು ಪ್ರಯತ್ನಿಸಿದ್ದೆವು ಎಂದರೆ ನಾನು ಬಂದಿಲ್ಲ ಎಂದು ಹೇಳುತ್ತಾರೆ. ನಮ್ಮ ತಾಯಿಗೆ, ನನ್ನ ತಂದೆ ಸೀಮೆಎಣ್ಣೆ ಹಾಕಿ ಸುಟ್ಟಿದ್ದರೆಂದು ಗೊತ್ತಿದ್ದರೂ ಸಹ, ತಂದೆಯನ್ನು ಹೊರಗಡೆ ಕರೆದುಕೊಂಡು ಬಂದು ತಮ್ಮನಿಗೆ ಮದುವೆ ಮಾಡಿ ಸೆಟ್ಟಲು ಮಾಡಿಸಬೇಕೆಂದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ತಾಯಿಯ ಮೇಲೆ ನನ್ನ ತಂದೆ ಸೀಮೆಎಣ್ಣೆ ಹಾಕಿ ಬೆಂಕಿ ಹಚ್ಚಿ ಸುಟ್ಟಿದ್ದಾರೆ ಎಂಬ ವಿಚಾರದಲ್ಲಿ ಈ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಸ್ಪತ್ರೆಗೆ ಹೋದಾಗ ನನಗೆ ವಿಚಾರ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಮತಿ ಎಸ್ ಎಂ ಬಿ ವಕೀಲರಿಂದ defence counsel ರವರಿಂದ ಃ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.
**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.